ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂ: ಡಿಟಿಇ/ಎನ್‌ಎಸ್‌ಎಸ್/ಇಟಿಐ/08/2011-12

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01,
ದಿನಾಂಕ;09-02-2017

## ಜ್ಞಾಪನ

**ವಿಷಯ:** ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಗಳ ತರಬೇತಿ ಶಿಬಿರಕ್ಕೆ ನಿಯೋಜನೆ ಬಗ್ಗೆ.
**ಉಲ್ಲೇಖ:** ಸಂಯೋಜನಾಧಿಕಾರಿ,ಎನ್.ಎಸ್.ಎಸ್-ಇಟಿಐ ಇವರ ಮಿಂಚಂಚೆ ದಿನಾಂಕ: 08-02-2017

*****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖಿತ ಪತ್ರಕ್ಕನುಸಾರ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಇಲ್ಲಿನ ಮಾನಸ ಗಂಗೋತ್ರಿಯಲ್ಲಿನ ಕರ್ನಾಟಕ ರಾಜ್ಯ ರಾ.ಸೇ.ಯೋ. ಅಧಿಕಾರಿಗಳ ಇ.ಟಿ.ಐ ಇವರ ವತಿಯಿಂದ ರಾ.ಸೇ.ಯೋ. ಚಟುವಟಿಕೆಗಳು ಹೆಚ್ಚು ಪರಿಣಾಮಕಾರಿಯಾಗಿ ನಡೆಸುವ ಉದ್ದೇಶದಿಂದ ತರಬೇತಿ ಹೊಂದದ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ದಿನಾಂಕ 15-02-2017 .ರಿಂದ 21-02-2017 ರವರೆಗೆ ನಡೆಸಲಾಗುತ್ತಿದೆ. ತಮ್ಮ ಸಂಸ್ಥೆಯ ಈ ಕೆಳಗೆ ಸೂಚಿತ ರಾ.ಸೇ.ಯೋ. ಕಾರ್ಯಕ್ರಮಾಧಿಕಾರಿಯನ್ನು ಸದರಿ ತರಬೇತಿಗೆ ನಿಯೋಜಿಸಲಾಗಿದೆ. ಕಾರಣ ಸಂಬಂಧಿಸಿದ ಅಧಿಕಾರಿಗಳನ್ನು ಕಡ್ಡಾವಾಗಿ ತರಬೇತಿಗೆ ಹಾಜರಾಗಲು ಅನುಕೂಲವಾಗುವಂತೆ ಸಂಸ್ಥೆಯಿಂದ ಬಿಡುಗಡೆಗೊಳಿಸಿ ಈ ಕಛೇರಿಗೆ ಮಾಹಿತಿ ನೀಡಲು ಸೂಚಿಸಲಾಗಿದೆ.

| | | | |
|---|---|---|---|
| 1 | GPT, KGF | Chandrashekar | 918147250326 |
| 2 | KHK Polytechnic , **Dharwad** | Irappa Pattar | 9880149547 |

ನಿಯೋಜಿಸಲಾಗುವ ರಾ.ಸೇ.ಯೋ ಕಾರ್ಯಕ್ರಮಾಧಿಕಾರಿಗಳ ಗಮನಕ್ಕೆ ಈ ಕೆಳಕಂಡ ಸೂಚನೆಗಳು ಮತ್ತು ಕೆಲವು ಮಾಹಿತಿಗಳನ್ನು ಕಡ್ಡಾಯವಾಗಿ ನೀಡುವಂತೆಯೂ ಸಹ ತಿಳಿಸಲಾಗಿದೆ.

1. ಕಾರ್ಯಕ್ರಮ ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ / ನಿರ್ದೇಶನಾಲಯ ಅಥವಾ ತಮ್ಮ ಕಾಲೇಜಿನ ಪ್ರಾಂಶುಪಾಲರುಗಳು ಕಾಲೇಜಿನಿಂದ ನಿಮ್ಮನ್ನು ಬಿಡುಗಡೆ ಮಾಡಿರುವಆದೇಶದ ಪ್ರತಿಯನ್ನು (Relieving Order) ಕಡ್ಡಾಯವಾಗಿ ತರುವುದು.
2. ತರಬೇತಿಕಾರ್ಯಕ್ರಮವು ದಿನಾಂಕ 15-02-2017 ರಂದು ಬೆಳಿಗ್ಗೆ 9.00 ಗಂಟೆಯಿಂದಲೇ ಪ್ರಾರಂಭವಾಗುವುದರಿಂದ ಹಿಂದಿನ ದಿವಸ ಅಂದರೆ 14-02-2017 ರಂದು ಸಾಯಂಕಾಲ 5.00 ಗಂಟೆಯೊಳಗೆ ತರಬೇತಿ ಸಂಯೋಜನಾಧಿಕಾರಿಗಳು, ಎನ್‌ಎಸ್‌ಎಸ್-ಇಟಿಐ ಮಾನಸ ಗಂಗೋತ್ರಿಯಲ್ಲಿನ ಗಾಂಧಿ ಭವನದ ಹತ್ತಿರವಿರುವ NCHS ಕಟ್ಟಡದಲ್ಲಿ ವರದಿ ಮಾಡಿಕೊಳ್ಳುವುದು. ಬೆಳಿಗ್ಗೆ 9.00 ಗಂಟೆಯ ನಂತರ ಬಂದವರನ್ನುತರಬೇತಿಗೆ ಸೇರಿಸಿಕೊಳ್ಳಲಾಗುವುದಿಲ್ಲ.
3. ತರಬೇತಿಕಾರ್ಯಕ್ರಮದ ಅವಧಿಯಲ್ಲಿ ರಾ.ಸೇ.ಯೋ ಅಧಿಕಾರಿಗಳು ವಾಸ್ತವ್ಯ ಮಾಡಲು ಎನ್‌ಎಸ್‌ಎಸ್-ಇಟಿಐ ಮಾನಸ ಗಂಗೋತ್ರಿಯಲ್ಲಿನ ಗಾಂಧಿಭವನದ ಹತ್ತಿರವಿರುವ NCHS ಕಟ್ಟಡದಲ್ಲಿ ವ್ಯವಸ್ಥೆ ಮಾಡಲಾಗಿದ್ದು, ಪ್ರತಿ ದಿನ ಬೆಳಿಗ್ಗೆ 6.30 ಗಂಟೆಗೆ ಧ್ವಜಾರೋಹಣ ಮತ್ತು ಪ್ರಾರ್ಥನೆಯಿಂದ ಪ್ರಾರಂಭಗೊಂಡು ಸಾಯಂಕಾಲ 7.30 ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಮುಗಿಯುವರೆವಿಗೂ ಪಾಲ್ಗೊಳ್ಳುವುದು ಕಡ್ಡಾಯವಾಗಿರುತ್ತದೆ.
4. ಕಾರ್ಯಕ್ರಮಾಧಿಕಾರಿಗಳು ಸ್ಟಾಂಪ್ ಸೈಜ್ ಅಳತೆಯ ಎರಡು ಭಾವಚಿತ್ರವನ್ನು ಮತ್ತು ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರವನ್ನುಒಟ್ಟು 4 ಫೋಟೋಗಳನ್ನು ಕಡ್ಡಾಯವಾಗಿತರುವುದು(Two Stamp Size Photo +Two Passport Size Photo)
5. ತರಬೇತಿಕಾರ್ಯಕ್ರಮದಲ್ಲಿ ಭಾಗವಹಿಸುವ ಅಧಿಕಾರಿಗಳು ತಮಗೆ ಅವಶ್ಯಕವಿರುವ ಲಘು ಹೊದಿಕೆಯನ್ನುತರುವುದು.
6. ತರಬೇತಿಕಾರ್ಯಕ್ರಮಕ್ಕೆ ತಾವು ಆಗಮಿಸುವ ಸಂಬಂಧವಾಗಿತಮಗೆ ಮೈಸೂರು ವಿಶ್ವವಿದ್ಯಾನಿಲಯದNSS-ETI ಸಂಸ್ಥೆಯ ವತಿಯಿಂದ ತಮಗೆ ಯಾವುದೇರೀತಿಯ ಪ್ರಯಾಣ ಭತ್ಯೆಯನ್ನು ಭರಿಸಲುಅವಕಾಶವಿರುವುದಿಲ್ಲ.

ಎನ್‌ಎಸ್‌ಎಸ್–ಇಟಿಐತರಬೇತಿಕಾರ್ಯಕ್ರಮದ ಬಗೆಗಿನ ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡವರನ್ನು ಸಂಪರ್ಕಿಸಬಹುದಾಗಿದೆ.

| ಕ್ರ. ಸಂ. | ಹೆಸರು ಮತ್ತು ವಿಳಾಸ | ದೂರವಾಣಿ& ಮಿಂಚಂಚೆ ವಿಳಾಸ |
|---|---|---|
| 1. | ಡಾ. ಚಂದ್ರಶೇಖರ<br>ಸಂಯೋಜನಾಧಿಕಾರಿಗಳು, ಎನ್‌ಎಸ್‌ಎಸ್–ಇಟಿಐ<br>ಎನ್‌ಎಸ್‌ಎಸ್–ಇಟಿಐ ಭವನ, ರಾಮಸ್ವಾಮಿ ವೃತ್ತದ ಬಳಿ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–570005. | ಕಚೇರಿ : 0821– 2419326 / 581<br>ಮಿಂಚಂಚೆ: etiuommysore@gmail.com |
| 2. | ಪ್ರೊ. ಜಿ.ಬಿ ಶಿವರಾಜು<br>ತರಬೇತಿ ಸಂಯೋಜನಾಧಿಕಾರಿಗಳು, ಎನ್‌ಎಸ್‌ಎಸ್–ಇಟಿಐ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–570005. | ಮೊಬೈಲ್: 9449609127 |
| 3. | ಶ್ರೀ. ಡಿ. ಚಂದ್ರಹಾಸ<br>ಅಕೌಂಟೆಂಟ್, ಎನ್‌ಎಸ್‌ಎಸ್–ಇಟಿಐ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು– 570005. | ಕಚೇರಿ : 0821– 2419326 / 581<br>ಮೊಬೈಲ್ : 9964236353 |

ನಿರ್ದೇಶಕರು.

ಪ್ರತಿಗಳು:

1. ರಾಜ್ಯ ಸಂಪರ್ಕಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ ಯುವಜನ ಸೇವಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ನಿರ್ದೇಶಕರು ಎನ್.ಎಸ್.ಎಸ್. ಪ್ರಾದೇಶಿಕ ಕೇಂದ್ರ, ಬಸವನಗುಡಿ, ಬೆಂಗಳೂರು–04.
3. ಡಾ: ಕಾಳಚನ್ನೇಗೌಡ. ಸಂಯೋಜನಾಧಿಕಾರಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.
4. ಸಂಬಂಧಪಟ್ಟ ಪಾಲಿಟೆಕ್ನಿಗಳ ಪ್ರಾಚಾರ್ಯಗಳಿಗೆ–ಸೂಕ್ತ ಕ್ರಮಕ್ಕಾಗಿ.
5. ಇ–ಆಡಳಿತ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು
6. ಕಛೇರಿ ಕಡತಕ್ಕೆ.

F:\NSS-2016-17\ETI-12-13 PRO Traning